ಓಂಕಾರಯ್ಯನ ಮನೆ ತಲಪಿದ್ದೆವು.

"ಕಾರನ್ನು ತುಸು ದೂರದಲ್ಲಿ ಮರೆಯಲ್ಲಿ ನಿಲ್ಲಿಸು. ನಾವು ಇಲ್ಲಿರುವುದು ಗೊತ್ತಾಗಬಾರದು."

ಚಕಿತಗೊಂಡರೂ, ನಾನು ಆತನ ಮಾತನ್ನು ಪಾಲಿಸಿದೆ. ಕರಮಚಂದ ಸುತ್ತಲೂ ಪರೀಕ್ಷಕ ದೃಷ್ಟಿ ಹರಿಸುತ್ತಾ, ಸರಸರನೆ ಹೆಜ್ಜೆ ಹಾಕಿದ. ಕೆಲವು ಕ್ಷಣಗಳಲ್ಲಿ ನಾವು ಓಂಕಾರಯ್ಯನ ಮನೆಯೊಳಗಿದ್ದೆವು. ಹಜಾರದಲ್ಲಿ ಓಂಕಾರಯ್ಯನ ಜೊತೆಯಲ್ಲಿ ಪರಿಚಿತ ಮುಖ ಕಂಡಿತು. ನಗರ ಠಾಣೆಯ ಪೇದೆ ಕಾಳಪ್ಪ.

"ಸಾರ್, ಮೊಬೈಲ್ ಕಂಪನಿಯವರಿಂದ ಮೆಸೇಜ್ ಬಂದಿದೆ. ಆ ಫೋನು ವಿರಾಜಪೇಟೆ ಬಸ್ ನಿಲ್ದಾಣದ ಸಮೀಪದ ಟವರಿನಲ್ಲಿ ಕಾಣ್ಸಿಕೊಂಡಿದೆಯಂತೆ... ಅದ್ಕೇ ನಿಮ್ಗೆ ಫೋನು ಮಾಡಿದ್ದು."

"ಓಂಕಾರಯ್ಯ, ಈಗ ನಿಮ್ಮ ಆ ತಮ್ಮಯ್ಯ ಯಾನೇ ಕುಪ್ಪಂಡ ವೇಣು ಬರ್ತಾನೆ. ನೀವು ಆತನನ್ನು ಇಲ್ಲಿ ಕೂರಿಸಿ, ಮಾತನಾಡಿ. ನಾವಿಲ್ಲಿ ಈ ಕೋಣೆಯಲ್ಲಿರುತ್ತೇವೆ. ಆತನ ಬೆನ್ನು ಕೋಣೆಯ ಕಡೆಗೆ ಇರುತ್ತದೆ." ಹಾಗೆಂದು ಹೇಳಿ ಆತ ಜೇಬಿನಿಂದ ಎರಡು ಫೋಟೊಗಳನ್ನು ತೆಗೆದ.

"ದೇಚಮ್ಮ, ನೀವು ಈತನನ್ನು ಗುರುತಿಸಬಲ್ಲಿರಾ?"

"ಹಾಂ... ಇವ್ನೇ! ಮೊನ್ನೆ ಬಂದಿದ್ದ ಆಸಾಮಿ. ಆದರೆ ಇಷ್ಟು ಗಡ್ಡ ಇರಲಿಲ್ಲ." ನಕ್ಕ ಕರಮಚಂದ ಇನ್ನೊಂದು ಫೋಟೊವನ್ನು ಓಂಕಾರಯ್ಯನ ಎದುರು ಹಿಡಿದ.

"ಮೇದಪ್ಪ! ಇವ್ನ ಫೋಟೊ ನಿಮಗೆಲ್ಲಿ ಸಿಕ್ಕಿತು?"

"ಇವೆರಡೂ ಒಬ್ಬನದ್ದೇ ಫೋಟೊ. ಚಿತ್ರಕ್ಕೆ ಗಡ್ಡ ಬಿಡಿಸಿದ್ದು ನಾನೇ. ಮೇದಪ್ಪನಿಗೆ ಮಚ್ಚೆಯಿದೆ ಅಂದಾಗಲೇ ಗಡ್ಡ ಅಂಟಿಸಿದ್ದು ಅಂತ ಊಹಿಸಿದೆ."

ಅಷ್ಟರಲ್ಲಿ ಗೇಟಿನ ಸಪ್ಪಳವಾಯಿತು. ನಾವು ಚಂಗನೆ ಪಕ್ಕದ ರೂಮಿಗೆ ಧಾವಿಸಿದೆವು. ಕೆಲ ಕ್ಷಣಗಳಲ್ಲಿ ಕರೆಗಂಟೆ ಸದ್ದು ಮಾಡಿತು. ಓಂಕಾರಯ್ಯ ಬಾಗಿಲ ಅಗಳಿ ತೆಗೆಯುವ ಸದ್ದು ಮತ್ತು ಸಂಭಾಷಿಸಿದ್ದೂ ಕೇಳಿಸಿತು. ಕುರ್ಚಿ ಎಳೆದ ಕೀರಲು ದನಿ ಅವರಿಬ್ಬರೂ ಆಸೀನರಾಗಿದ್ದನ್ನು ಖಚಿತಪಡಿಸಿತು. ಕರಮಚಂದ ರಿವಾಲ್ವರ್ ತೆಗೆದುಕೊಂಡು, ಮಿಂಚಿನ ವೇಗದಲ್ಲಿ ಹಜಾರಕ್ಕೆ ನುಗ್ಗಿ, ನಮಗೆ ಬೆನ್ನು ಹಾಕಿ ಕುಳಿತಿದ್ದ ವ್ಯಕ್ತಿಯ ಕುತ್ತಿಗೆಗೆ ತಾಗಿಸಿದ.

"ಮಾಚಯ್ಯ ಉರುಫ್ ತಮ್ಮಯ್ಯ ಉರುಫ್ ಕುಪ್ಪಂಡ ವೇಣು... ನಿನ್ನ ಆಟ ಮುಗಿಯಿತು!"

ಆ ಮನುಷ್ಯ ಅತೀವ ಗಾಬರಿಯಲ್ಲಿ ಕೈ ಎತ್ತಿ ನಿಂತ. ಕಾಳಪ್ಪ ಆತನನ್ನು ಹಿಡಿದುಕೊಂಡ.

"ನಕ್ಷತ್ರ ಜ್ಯುವೆಲ್ಲರಿಯಲ್ಲಿ ವಜ್ರ ಕದ್ದಿದ್ದು ನೀನೇ ಅಲ್ವೆ?"

"ನಾನಲ್ಲ. ಎಲ್ಲಾ ಮಾಡಿದ್ದು ತಂಗರಾಜು..."

"ಹೂಂ. ಅವ್ನು ಯೋಜನೆ ಹಾಕ್ದ. ನೀನು ನೆರವು ನೀಡಿದೆ... ಈ ತಂಗರಾಜು ಉರುಫ್ ಮೇದಪ್ಪ ಅನ್ನುವವನು ನಕ್ಷತ್ರ ಜ್ಯುವೆಲ್ಲರಿಯ ನೌಕರ. ಅವ್ನೊಂದು ವಜ್ರ ಕದಿಯುವ ಪ್ಲಾನ್ ಹಾಕ್ದ. ಹೇಗೆ ಗೊತ್ತೆ? ಪೇಪರ್ ವೆಯಿಟ್ ಮೂಲಕ!! ಕಂಪೆನಿ ಮಾಲೀಕರು ಗಿರಾಕಿಗಳಿಗೆ ಕೊಡಲು ಅವ್ನಲ್ಲಿ ಪೇಪರ್ ವೆಯಿಟ್ ಮಾಡಿಸಿ, ತರಲು ಹೇಳಿದ್ರು. ಅವ್ನು ಮಡಿಕೇರಿಯ ಒಬ್ಬ ಪೇಪರ್ ವೆಯಿಟ್ ತಯಾರಕನಿಗೆ ಆ ಕೆಲ್ಸ ಒಪ್ಪಿಸಿದ. ಚಿನ್ನದ ಬಣ್ಣದ ಬಾಕ್ಸ್ ಆಕಾರದ, ಸುಮಾರು ನೂರೈವತ್ತು ಗ್ರಾಮ್ ತೂಕದ ಪೇಪರ್ ವೆಯಿಟ್ ಮಾಡಲು ಹೇಳಿದ. ಆದರೆ ಅಲ್ಲಿ ಒಂದು ಬುದ್ಧಿವಂತಿಕೆ ಮಾಡಿದ. ಒಂದು ಪೇಪರ್ ವೆಯಿಟ್ ಮಾತ್ರ ಟೊಳ್ಳಾಗಿರುವಂತೆ ನಿರ್ಮಿಸಲು ಹೇಳಿದ. ಅದರ ಒಂದು ಬದಿಯಲ್ಲಿ ಷಟರ್ ತರಹ, ಮುಚ್ಚಿ, ತೆರೆಯುವ ವ್ಯವಸ್ಥೆ ಮಾಡಲು ಸೂಚಿಸಿದ. ನಿಮಗೆ ಉದ್ದೇಶ ಅರ್ಥವಾಯಿತೆ? ಟೊಳ್ಳಾದ ಪೇಪರ್ ವೆಯಿಟ್‌ನೊಳಗೆ ಏನಾದರೂ ಅಡಗಿಸಿಡಬಹುದು!! ತಂಗರಾಜು ಅದರೊಳಗೆ ವಜ್ರ ಅಡಗಿಸಿಟ್ಟ ಯಾರ ಗಮನಕ್ಕೂ ಬರದ ರೀತಿಯಲ್ಲಿ. ಗ್ರಾಹಕನ ಸೋಗಿನಲ್ಲಿ ಖರೀದಿಗೆ ಬಂದವನು ಮಾಚಯ್ಯ. ಆತನಿಗೆ ಉಡುಗೊರೆಯಾಗಿ ಆ ಪೇಪರ್ ವೆಯಿಟ್